ದಿನಾಂಕ 21-01-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 3 ನೇ ಪ್ರತಿವಾದಿಯರ ಪರ ಶ್ರೀ ಎಮ್.ಎ ವಕೀಲರಿಂದ.**

ನನ್ನ ಮದುವೆ 35 ವರ್ಷಗಳ ಹಿಂದೆ ಆಗಿರುತ್ತದೆ. ನನ್ನನ್ನು ಬಲ್ಲಟಗಿ ಗ್ರಾಮದ ಮಹ್ಮದ ಹುಸೇನನಿಗೆ ಮದುವೆ ಮಾಡಿಕೊಡಲಾಗಿರುತ್ತದೆ. 1 ನೇ ಪ್ರತಿವಾದಿಯನ್ನು ಮಾನವಿಯ ಮೌಲಾಸಾಬನಿಗೆ 40 ವರ್ಷಗಳ ಹಿಂದೆ ಮದುವೆ ಮಾಡಿಕೊಡಲಾಗಿದೆ. ಕಳೆದ 8-10 ವರ್ಷಗಳಿಂದ ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ಮಾತುಕತೆ ಇಲ್ಲ ಎಂದರೆ ಸರಿ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಮತ್ತು ನಂತರದಲ್ಲಿ 1 ನೇ ಪ್ರತಿವಾದಿಯೊಂದಿಗೆ ನನ್ನ ಮಾತುಕತೆ ಇರುವುದಿಲ್ಲಎಂದರೆ ಸರಿ. ನಾನು ಮತ್ತು ನನ್ನ ಗಂಡ ಹಾಗೂ 2 ನೇ ಪ್ರತಿವಾದಿ ಜಿಂದಾವಲಿ ಮೂರು ಜನರು ಸೇರಿ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದರೆ ಸರಿಯಲ್ಲ, ನಾನು ಮತ್ತು ನನ್ನ ಗಂಡ ಮಾತ್ರ ಬಂದಿರುತ್ತೇವೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಮನೆಯಲ್ಲಿನ ಕಾರ್ಯಕ್ರಮಕ್ಕೆ ಹಾಗೂ ಅವಳ ಮಗಳ ಮದುವೆಗೆ ನಾನು ಹೋಗಿದ್ದೆ ಎಂದರೆ ಸರಿ. ಈಗಲೂ ನನ್ನ ಮತ್ತು 2 ನೇ ಪ್ರತಿವಾದಿಯ ನಡುವೆ ಒಳ್ಳೆಯ ಸಂಬಂಧ ಇದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಗೊತ್ತಿದೆ. ಜಮೀನು ಸರ್ವೆ ನಂಬರ 201 ಮತ್ತು 202 ಆಗಿರುತ್ತವೆ. ಸರ್ವೆ ನಂಬರ 202 ಕ್ಷೇತ್ರ 8 ಎಕರೆ 22 ಗುಂಟೆ 1 ಪ್ರತಿವಾದಿಯ ಹೆಸರು ದಾಖಲಾಗುವುದಕ್ಕಿಂತ ಮುಂಚೆ ನನ್ನ ತಂದೆ ಸದರಿ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಕ್ರಯಕ್ಕೆ ಪಡೆದ ಸ್ವತ್ತಿನ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. 1 ನೇ ಪ್ರತಿವಾದಿ ತನ್ನ ಸ್ವಂತ ಸಂಪಾದನೆಯಿಂದ 1972-73 ರಲ್ಲಿ ಸರ್ವೆ ನಂಬರ 202 ನ್ನು ನೋಂದಾಯಿತ ಕ್ರಯಪತ್ರದ ಮೂಲಕ ಬಸನಗೌಡ ಇವರಿಂದ ಕ್ರಯಕ್ಕೆ ಪಡೆದಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಮುಟೇಶನ್ ಆಗಿ ಪಹಣಿಯಲ್ಲಿ ಹೆಸರು ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ 202 ನೀಲಗಲ್ ಗ್ರಾಮದಲ್ಲಿ ಬರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ ಜಿಂದಾವಲಿ ನೀಲಗಲ್ ಗ್ರಾಮದಲ್ಲಿ ಇರುತ್ತಾನೆ ಎಂದರೆ ಸರಿ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ವಿರುದ್ಧ ಓ.ಎಸ್ ನಂಬರ 8/2010 ರಲ್ಲಿ ಹಿರಿಯ ಸಿವಿಲ್ ನ್ಯಾಯಾಲಯ ದೇವದುರ್ಗದಲ್ಲಿ ದಾಖಲಿಸಿರುತ್ತಾಳೆ ಎಂದರೆ ಸರಿ. ಸದರಿ ದಾವೆ ಪ್ಯಾರಿಬಿ ಪರವಾಗಿ ಡಿಕ್ರಿ ಆಗಿರುತ್ತದೆ ಎಂದರೆ ಸರಿ. ನ್ಯಾಯಾಲಯದ ಮೂಲಕ ಇಪಿ 121/2013 ರಲ್ಲಿ ಸರ್ವೆ ನಂಬರ 202 ರ ಕಬ್ಜೆಯನ್ನು 1 ನೇ ಪ್ರತಿವಾದಿ ಪ್ಯಾರಿಬಿ ಜಿಂದಾವಲಿಯಿಂದ ಪಡೆದಿರುತ್ತಾಳೆ ಎಂದರೆ ಸರಿ. ಸದರಿ ಸ್ವಾಧೀನತೆ ಪಡೆದುಕೊಂಡ ನಂತರ ಸರ್ವೆ ನಂಬರ 202 ನ್ನು 3 ನೇ ಪ್ರತಿವಾದಿ ನಾಗರಾಜ ಇವರಿಗೆ ಮಾರಾಟ ಮಾಡಿರುತ್ತಾಳೆ ಎಂದರೆ ಸರಿ. ಸದರಿ ಖರೀದಿ ಪತ್ರದ ಆಧಾರದ ಮೇಲೆ ನಾಗರಾಜ ಸರ್ವೆ ನಂಬರ 202 ರ ಕಬ್ಜೆಯಲ್ಲಿ ಇರುತ್ತಾನೆ ಎಂದರೆ ಸರಿ. ಸರ್ವೆ ನಂಬರ 202

1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದು ಗೊತ್ತಿದ್ದರೂ ಪ್ರತಿವಾದಿಗಳಿಗೆ ತೊಂದರೆ ಕೊಡಲು ಈ ದಾವೆಯನ್ನು ಸರ್ವೆ ನಂಬರ 202 ರ ಮೇಲೂ ಸಹ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 201/1 ಕ್ಷೇತ್ರ 12 ಎಕರೆ 22 ಗುಂಟೆ ನನ್ನ ತಂದೆಯ ಸ್ವತ್ತಾಗಿರುತ್ತದೆ ಎಂದರೆ ಸರಿ. ಸದರಿ 1 ನೇ ಪ್ರತಿವಾದಿ ಸರ್ವೆ ನಂಬರ 201/1 ರ ಕುರಿತಾಗಿ ಓ.ಎಸ್ 39/2016 ನ್ನು ವಿಭಾಗಕ್ಕಾಗಿ ದಾವೆ ಸಲ್ಲಿಸಿದ್ದು ಸದರಿ ದಾವೆಯಲ್ಲಿ ನಾನೂ ಸಹ ಪಕ್ಷಗಾರಳಿದ್ದು ಸದರಿ ದಾವೆ ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಾಯಿಯೂ ಸಹ ಪಕ್ಷಗಾರಳು ಆಗಿದ್ದಳು ಎಂದರೆ ಸರಿ. ಸದರಿ ದಾವೆ ಚಾಲ್ತಿಯಲ್ಲಿರುವಾಗ ನನ್ನ ತಾಯಿ ಮೃತಳಾಗಿರುತ್ತಾಳೆ ಎಂದರೆ ಸರಿ. ನನ್ನ ತಾಯಿ 2005 ರಲ್ಲಿ ಮೃತಳಾಗಿರುತ್ತಾಳೆ ಎಂದು ವಾದ ಪತ್ರದಲ್ಲಿ ಸುಳ್ಳಾಗಿ ನಮೂದಿಸಿರುತ್ತೇನೆ ಎಂದರೆ ನನಗೆ ಹೇಳಲು ಬರುವುದಿಲ್ಲ ನನ್ನ ತಾಯಿ ತೀರಿಕೊಂಡು 8 ವರ್ಷ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಡಿಕ್ರಿಯ ಮೇಲೆ ಅಂತಿಮ ಡಿಕ್ರಿಗಾಗಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಅದರ ನೋಟಿಸನ್ನು ನಾನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನೋಟಿಸ ಬಂದಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಮತ್ತು 3 ರವರಿಗೆ ತೊಂದರೆ ಕೊಡಲು 2 ನೇ ಪ್ರತಿವಾದಿಯ ಮಾತು ಕೇಳಿ ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲೀಗಾಗಿ ಕಾಲಾವಕಾಶ ಕೋರಿರುತ್ತಾರೆ, ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.